## ಬಿಸಿಲ ಧಗೆ ಸಾಕಾಯಿತ? ಕರೆಯುತಿದೆ ಜಲಪಾತ...

ಅಂಗಾಲ ಕೆಳಗೆ ಸುಡುವ ಭೂಮಿ. ನೆತ್ತಿಯ ಮೇಲೂ ಸೂರ್ಯನೆಂಬ ಸುಡುಕೆಂಡ. ತಂಪಿನ ಬದಲು ಧಗೆಯನ್ನೇ ಪಸರಿಸುವ ಗಾಳಿ. ಈ ಉರಿತಾಪ ತಪ್ಪಿಸಿಕೊಳ್ಳಲು ಎರಡೇ ದಾರಿ – ಒಂದು ಕಾಡಿನ ಹಸಿರು, ಇನ್ನೊಂದು ನೀರತೇರು. ಕಾಡು, ಜಲಪಾತವೆಂದು ಊರು ಸುತ್ತಲು ವಿದ್ಯಾರ್ಥಿಗಳಿಗೆ ಬೇಸಿಗೆ ರಜೆಯ ನೆಪವೂ ಇದೆ. ಎರಡು–ಮೂರು ದಿನಗಳ ಪ್ರವಾಸ ಕೈಗೊಳ್ಳುವವರಿಗೆಂದು ನಾಡಿನ ಒಂದಷ್ಟು ಪ್ರವಾಸಿತಾಣಗಳನ್ನು 'ಸುಧಾ' ಮರಳಿ ಪರಿಚಯಿಸುತ್ತಿದೆ. ಪ್ರಕೃತಿಯ ವರದಾನದಂತೆ ಕಾಣಿಸುವ ಈ ಪ್ರದೇಶಗಳ ಕುರಿತ ಓದೇ ಮನಸ್ಸಿಗೆ ತಂಪು ನೀಡುವಂತಹದ್ದು ಹಾಗೂ ಪ್ರವಾಸ ಹೊರಡಲು ಪ್ರೇರೇಪಿಸುವಂತಹದು.



ಕಲ್ಲ ಮೇಲೆ ಹಾಲ ಹೊದಿಕೆ... ಸಾತೊಡ್ಡಿ ಜಲಪಾತದ ನೊರೆನೀರ ನೋಟ

